ಅ) ಸದರಿ ಜಾಗಕ್ಕೆ ನೂತನ ಪೊಲೀಸ್ ಠಾಣೆ ತೆರೆಯಲು ಸರ್ಕಾರಕ್ಕೆ ಸಾಕಷ್ಟು ಸಲ ಮನವಿ ಮಾಡಿದ್ದಾಗ್ಯೂ ಕೂಡ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಇನ್ನೆಷ್ಟು ದಿವಸಗಳಲ್ಲಿ ಪೊಲೀಸ್ ಠಾಣೆ ತೆರೆಯಲಾಗುವುದು? ಈ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು?

ಅ) ಅಳಂದ ತಾಲ್ಲೂಕಿನ ವಿ.ಕೆ. ಸಲಗರ ಗ್ರಾಮದಲ್ಲಿ ಮರದಿಯಾಗಿರುವ ಕಳ್ಳತನ ಹಾಗೂ ಗಲಾಟೆಗಳ ಸಂಖ್ಯೆ ಈ ಕೆಳಕಂಡಂತಿದೆ.

	1989	1990	1991
ಕಳ್ಳತನ	1	-	1
ಗಲಾಟೆಗಳು, ದೊಂಬಿ	1	1	1

ಆ) ವಿ.ಕೆ. ಸಲಗರ ಗ್ರಾಮದಲ್ಲಿ ಹೊಸ ಪೊಲೀಸ್ ಠಾಣೆಯೊಂದನ್ನು ತೆರೆಯುವ ಬಗ್ಗೆ ಯಾವ ಪ್ರಸ್ತಾಪವು ಇರುವುದಿಲ್ಲ. ಈ ಪ್ರದೇಶದ ಅಪರಾಧ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗಳ ಪರಿಸ್ಥಿತಿಗಳಿಂದಲೂ ಸಹ ಇದು ಅವಶ್ಯಕವೆಂದು ಕಂಡು ಬಂದಿರುವುದಿಲ್ಲ.

ಇ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ತೊಂದರೆ.

3215 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 15-8-91ರಂದು ಬೆಂಗಳೂರು ಮಹಾನಗರದ ಜನಸಂಖ್ಯೆ ಎಷ್ಟು?

ಆ) ನಗರದ ಜನಸಂಖ್ಯೆಗೆ ಬೇಕಾಗುವ ಕುಡಿಯುವ ನೀರಿನ ಪ್ರಮಾಣವೆಷ್ಟು?

ಇ) ನಗರದ ಜನತೆಗೆ 2001ನೇ ಇಸವಿಗೆ ಬೇಕಾಗುವಷ್ಟು ನೀರನ್ನು ಒದಗಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಯ ವಿವರಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) 1991ನೇ ಇಸವಿಯಲ್ಲಿ ನಡೆದ ಜನಗಣತಿ ಪ್ರಕಾರ ಬೆಂಗಳೂರು ನಗರದಲ್ಲಿ ಒಟ್ಟು ಜನಸಂಖ್ಯೆ ಸುಮಾರು 42 ಲಕ್ಷ.

ಆ) 630 ದಶ ಲಕ್ಷ ಲೀಟರ್.

ಇ) ಕಾವೇರಿ ನೀರು ಸರಬರಾಜು ಯೋಜನೆ 3ನೇ ಹಂತವನ್ನು 1992ನೇ ಜೂನ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಇದಾದ ನಂತರ ಕಾವೇರಿ ನೀರು ಸರಬರಾಜು 4ನೇ ಹಂತವನ್ನು 1000 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಇದನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಬೆಂಗಳೂರು ನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಖಾಲಿಮನೆಗಳ ಸಂಖ್ಯೆ.

3319 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಗೃಹನಿರ್ಮಾಣ ಮಂಡಳಿ ನಿರ್ಮಿತ ಮನೆಗಳಲ್ಲಿ ಖಾಲಿಯಿರುವ ಮನೆಗಳ ಸಂಖ್ಯೆಯೆಷ್ಟು?

ಅ) ಬೆಂಗಳೂರು ನಗರದಲ್ಲಿ ಕೆಹೆಚ್ ಬಡಾವಣೆಗಳಲ್ಲಿ ಖಾಲಿಯಿರುವ ನಿವೇಶನಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಗೃಹ ಮಂಡಳಿ ಗೃಹ ನಿರ್ಮಿತವಾದ ಮನೆಗಳ ಪೈಕಿ ಈ ಕೆಳಕಂಡ ಮನೆಗಳು ಖಾಲಿಯಿರುತ್ತವೆ.

1) ದುರ್ಬಲ ವರ್ಗದವರಿಗಾಗಿ ಕಟ್ಟಿಸಿದ ಸ್ಯಾನಿಟರಿಕೋರ್ ಮನೆಗಳು. 21
2) ಆರ್ಥಿಕ ದುರ್ಬಲ ವರ್ಗದವರಿಗಾಗಿ ಕಟ್ಟಿಸಿದ ಮನೆಗಳು 4
3) ಕಡಿಮೆ ಆದಾಯ ವರ್ಗದವರಿಗಾಗಿ ಕಟ್ಟಿಸಿದ ಮನೆಗಳು 15

ಆ) ಬೆಂಗಳೂರು ನಗರದ ಕರ್ನಾಟಕ ಗೃಹ ಮಂಡಳಿ ಬಡಾವಣೆಗಳಲ್ಲಿ 80 ನಿವೇಷನಗಳು ಖಾಲಿ ಇರುತ್ತವೆ.

ಬಾರ್‌ಗಳು ಮತ್ತು ಸಿಎಲ್ 2 ಅಂಗಡಿಗಳು.

3140 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಕಳೆದ 10 ವರ್ಷಗಳಿಂದ ಪ್ರಾರಂಭವಾಗಿರುವ ಬಾರ್‌ಗಳು ಮತ್ತು ಸಿಎಲ್-2 ಅಂಗಡಿಗಳೆಷ್ಟು?

ಆ) ಅವುಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಿಕ ಉತ್ಪಾದನೆ ಎಷ್ಟು?

ಇ) ಈ ಬಾರ್‌ಗಳು ಮತ್ತು ಸಿಎಲ್-2 ಅಂಗಡಿಗಳು ದಿನ ಬೆಳಗಾದರೆ ಸರ್ಕಾರದ ಇಲಾಖೆಯ ನಿಯಮಗಳನ್ನು ಉಲ್ಲಂಘಿಸುತ್ತಿರುವುದು ನಿಜವೆ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)

ವರ್ಷ	ಬಾರುಗಳ ಸಂಖ್ಯೆ	ಸಿಎಲ್-2 ಅಂಗಡಿಗಳು
1981-82	510	1733
1982-83	554	1776
1983-84	780	2274
1984-85	1187	2825
1985-86	1486	2930
1986-87	1282	2960
1987-88	1922	3177
1988-89	1916	3142
1989-90	1925	3166
1990-91	2180	3445

ಆ)

	ಕೋಟಿ ರೂ.ಗಳಲ್ಲಿ	
1981-82	-	16.01
1982-83	-	17.55
1983-84	-	25.41
1984-85	-	29.15